'ಅಹಂ' (ನಾನು) ತತ್ತ್ವದ ಸ್ಥೂಲ ಪರಿಚಯ

–ಡಾ. ಕೆ.ಎಲ್. ಪ್ರಸನ್ನಾಕ್ಷಿ

ಎಲ್ಲ ಅನುಭವಗಳ ಮೂಲ

'ನಾನು' ಎಂಬುದೇ ಎಲ್ಲಾ ಸುಖ ದುಃಖಗಳಿಗೂ ಮೂಲ. ನನಗೆ ಸಂಬಂಧ ಪಟ್ಟವರ, ನನ್ನ ಅಥವಾ ನನ್ನ ಮನೆಯವರ ಅಭಿವೃದ್ಧಿ, ಏಳಿಗೆ, ಸುಖ, ಶ್ರೇಯಸ್ಸು ಇತ್ಯಾದಿ ಆನಂದವನ್ನು ನೀಡುತ್ತವೆ. ನನಗೆ, ನನ್ನ ಮನೆಯವರಿಗೆ ಆದ ಅಪಮಾನವೋ, ನಿರಾಶೆಯೋ, ಹಿಂಸೆಯೋ, ನೋವೋ, ದುಃಖಕ್ಕೆ ಕಾರಣವಾಗುತ್ತದೆ. ಈ ಎರಡರ ಹಿನ್ನೆಲೆಯಲ್ಲಿ ಎಲ್ಲಾ ಹಂತದಲ್ಲಿ ಕಾಣುವುದು 'ನಾನು' ಎಂಬುದು. ಈ 'ನಾನು' ಎಂಬುದರ ಪಾತ್ರ ಜೀವನದಲ್ಲಿ ತುಂಬಾ ಮಹತ್ತ್ವದ್ದು. ಇದು ಯಾರನ್ನೂ ಸುಲಭವಾಗಿ ಬಿಡದು.

ಈ 'ನಾನು'ಎಂಬುದರ ಸರಿಯಾದ ಪರಿಚಯವಿಲ್ಲದೇ ಇರುವುದೇ ನಮ್ಮ ಜೀವನದ ಪ್ರತಿಯೊಂದು ಭಾವೋದ್ವೇಗಗಳಿಗೂ ಸುಖ-ದುಃಖ, ಲಾಭ-ನಷ್ಟ, ಜಯ-ಅಪಜಯ, ಮಾನ-ಅಪಮಾನ ಇತ್ಯಾದಿ ದ್ವಂದ್ವಗಳಿಗೂ ಕಾರಣ. ನಮ್ಮ ಜೀವನದ, ಕಣಕಣದ ಅನುಭವದಲ್ಲೂ, ಇದರ ಪಾತ್ರವಿದ್ದೇ ಇದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶ – ಈ 'ನಾನು' ಎಂಬುದು ನನಗೆ ಮಾತ್ರವೇ? ಇತರರಿಗಿಲ್ಲವೇ? ಎಂಬುದು.ಇದು ನನ್ನಲ್ಲಿರುವಂತೆ, ನಿಮ್ಮಲ್ಲಿಲ್ಲವೆ? ಅವರಲ್ಲಿಲ್ಲವೆ? ಅದರಲ್ಲಿಲ್ಲವೆ? ಇದರಲ್ಲಿಲ್ಲವೆ? ಎಲ್ಲಿಲ್ಲ? ಪ್ರತಿಯೊಂದು ಜೀವಕಣ ಬದುಕಲು ಕ್ಷಣ ಕ್ಷಣ ಹೋರಾಡುವುದೇ ಈ 'ನಾನು' ಎಂಬುದರ ಪ್ರಭಾವದಿಂದ. **ಮನು-ಅವಬೋಧನೇ** (ತಿಳಿಯುವುದು) ಎಂಬ ಧಾತುವಿನಿಂದ **'ಮಾನವ'** ಶಬ್ದ ಉಂಟಾಗಿದೆ. ಆದ್ದರಿಂದ ಮಾನವನಿಗೆ ಮಾನವತ್ವವನ್ನಿತ್ತಿರುವುದು, ಅವನಲ್ಲಿರುವ 'ಇದನ್ನು' ತಿಳಿಯಬಲ್ಲ ಸಾಮರ್ಥ್ಯವೇ. ಈ ಅರಿವನ್ನು ಕಳೆದುಕೊಂಡರೆ ಅವನು ದಾನವನಾಗುತ್ತಾನೆ.

'ಅಹಂ'ಕಾರವೇ ನಮ್ಮ ಎಲ್ಲ ಬವಣೆಗಳಿಗೂ ಮೂಲ; ಈ 'ಅಹಂ' ಕಾರವನ್ನು ಬ್ರಹ್ಮಾಕಾರವನ್ನಾಗಿ ಅಂದರೆ ಬೃಹದಾಕಾರವಾಗಿ, ವಿಶ್ವವ್ಯಾಪಿಯಾಗಿ ಮಾಡಬೇಕು. ಒಂದು ವ್ಯಕ್ತಿತ್ವಕ್ಕೆ ಅಂಟಿಕೊಳ್ಳುವುದರ ಬದಲು ಮಾನವಕೋಟಿಯೊಡನೆ ಒಂದಾಗಬೇಕು. ಆಗ ನಮಗೆ ಶಾಂತಿ ನೆಮ್ಮದಿ. ಇದು ಈ ಲೇಖನದ ಮುಖ್ಯ ಭಾವ. ಶ್ರೀಮತಿ ಪ್ರಸನ್ನಾಕ್ಷಿಯವರು ಶಾಸ್ತ್ರಾಧಾರದ ಮೇಲೆ ಈ ವಿಷಯವನ್ನು ಪ್ರತಿಪಾದಿಸಿದ್ದಾರೆ.

'ನಾನು'ವಿನ ವ್ಯಾಪ್ತಿ

ಎಲ್ಲೆಡೆ, ಎಲ್ಲದರೊಳಗೆ, ಈ 'ನಾನು' ಎಂಬುದಿದೆಯೆಂದಮೇಲೆ ನಾವು ತಿಳಿದುಕೊಂಡಿರುವ ಕೇವಲ ಈ ಪುಟ್ಟಶರೀರದಲ್ಲಿ ಮಾತ್ರವೇ 'ನಾನು' ಎಂಬುದಿಲ್ಲ ಎಂಬ ಅಂಶ ಸ್ಪಷ್ಟವಾಯಿತು. ಹಾಗಾದರೆ ಈ 'ನಾನು' ಎಂಬುದು ಯಾವುದು? ಅದರ ಸ್ವರೂಪವೇನು? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. **ವಾಗಾಂಭೃಣೀ ಸೂಕ್ತ**ದಲ್ಲಿ ಆಂಭೃಣ ಋಷಿಪುತ್ರಿ ಈ ತತ್ತ್ವವನ್ನು ಚೆನ್ನಾಗಿ ವಿವರಿಸುತ್ತಾಳೆ. 'ಅಹಂ' ಎಂಬುದು ಮಹದ್ಬ್ರಹ್ಮವು ವಿಸ್ತಾರ ಹೊಂದುವ ಕ್ಷೇತ್ರ. ಇದೇ ಅಷ್ಟವಸುಗಳು, ಏಕಾದಶರುದ್ರ, ದ್ವಾದಶಾದಿತ್ಯರನ್ನೊಳಗೊಂಡ **ವಿಶ್ವದೇವ ತತ್ತ್ವ**, ಧಾರಕಪೋಷಕಾದಿ ತತ್ತ್ವಗಳಾದ **ತ್ವಷ್ಟ್ರ, ಪೂಷಾ, ಭಗ** ಇತ್ಯಾದಿ ದೇವತಾ ತತ್ತ್ವಪ್ರಕಾಸವೂ ಇದೇ. ಇದು ಸಮಸ್ತ **ಜೀವಿಗಳ** ನಿಯಾಮಕವಾದ ಭ್ರಾಜಿಷ್ಣುವಾದ, ಶೋಭಾಯಮಾನವಾದ ರೂಪವಾಗಿ ಸಕಲ ಚರಾಚರಗಳ ಚೈತನ್ಯಸ್ರೋತವಾಗಿ, ಪರಮಪಾವನ ನೆಲೆಯಾಗಿರುವುದು. ಈ ಲೋಕದ ಸಕಲ ವಿಧ ವ್ಯವಹಾರಗಳ ಪ್ರೇರಕ, ಕಾರಕವೂ ಇದೇ....

ಇಷ್ಟು ವಿಶಾಲವೂ ಉನ್ನತವೂ ಆದ 'ಅಹಂ' ಎಂಬುದಕ್ಕೆ ಪರದೆ ಹಾಕಿ, ಅಥವಾ ಒಂದು ಗೆರೆ ಎಳೆದುಕೊಂಡು ಚಿಕ್ಕದಾಗಿ ಮಾಡಿಕೊಂಡು ಬಿಟ್ಟಿದ್ದೇವೆ. ಇದನ್ನೇ ಮಾಯೆಯೆಂದು ಕರೆಯುತ್ತಾರೆ. ಇದೇ ಅಜ್ಞಾನ, ಅವಿದ್ಯೆ, ಇತ್ಯಾದಿ. ಆದುದರಿಂದಲೆ ಅನುಭಾವಿ ಸಂತರೊಬ್ಬರು–

'ಬಿರಿಭ್ರಮೆಯಿಂದಲಿ ಕೆಡದಿರು
ಮನುಜ ಪರ ವಸ್ತುವ ಮರೆತು
ತರಳರು ಸತಿಸುತ ಸೋದರ ಬಾಂಧವರು
ಮರಣ ಕಾಲದಲಿ ಆಗುವರೆ?
ಜನನಕೆ ಮುನ್ನ ನಿನಗವರಾರು?
ನೀನಾರವರಿಗೆ ಮೂಢಾತ್ಮ?
ತನುವಿರುವನಕ ಅನುಸರಿಸುವರು
ಕೊನೆಯಲಿ ನೀನೋರ್ವನೆ ಜೀವಾತ್ಮ.'

ಎಂದು ತಮ್ಮ ಅನುಭವದ ಪರಿಪಾಕವನ್ನು ಬೋಧಿಸಿ ಎಚ್ಚರಿಸುತ್ತಾರೆ.

ಭಾವೋದ್ವೇಗಗಳನ್ನು ನಿಗ್ರಹಿಸುವ ಬಗೆ

ನಮ್ಮಲ್ಲಿ ಭಾವೋದ್ವೇಗಾದಿಗಳು ಮೂಡಿದ ಕ್ಷಣದಲ್ಲೇ ಜನನಕೆ ಮುನ್ನ ನಿನಗವರಾರು? ನೀನಾರವರಿಗೆ ಮೂಢಾತ್ಮ? ಎಂಬ ಪ್ರಶ್ನೆ ಹಾಕಿಕೊಂಡು ಮನನಮಾಡತೊಡಗಿದರೆ, ನಮಗಾದ ನೋವು ನಲಿವುಗಳ ಕಾರಣದ ಉಬ್ಬರವಿಳಿತಗಳು ನಿಧಾನವಾಗಿ ಇಳಿದು ಹೋಗುವುವು. ನಾನು ಇವರಿಗೆ ಜನಿಸಿದೆನಾದ ಕಾರಣ ಇವರು ತಂದೆ, ತಾಯಿ ; ನನ್ನ ಮೊದಲು ಜನಿಸಿದ ಕಾರಣ ಅಣ್ಣ, ಅಕ್ಕ; ನನ್ನ ನಂತರ ಜನಿಸಿದ ಕಾರಣ ತಮ್ಮ, ತಂಗಿ ; ನನಗೇ ಜನಿಸಿದ ಕಾರಣ ಮಗ, ಮಗಳು ಇತ್ಯಾದಿ. ಇದನ್ನೇ ಯಾಜ್ಞವಲ್ಕ್ಯರು ಮೈತ್ರೇಯಿಗೆ ಉಪದೇಶಿಸುವಾಗ **'ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ, ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ....'** ಪತಿ, ಪತ್ನಿ ಸುತ, ಧನ, ಕನಕ, ಬಂಧು, ಬಾಂಧವ, ಪಶು ಇತ್ಯಾದಿ ಎಲ್ಲವೂ ಈ ಆತ್ಮನ ಹಿನ್ನೆಲೆಯಲ್ಲೇ, ಆತ್ಮನ ಕಾರಣಕ್ಕೇ ಪ್ರಿಯವಾಗುತ್ತವೆ. ಎಲ್ಲಾ ಆತ್ಮ ಕೇಂದ್ರಿತವಾದ ವ್ಯವಹಾರ ಪ್ರಿಯ. ಆದುದರಿಂದ **'ಆತ್ಮಾ ವಾ ಅರೇ ದ್ರಷ್ಟವ್ಯೋ, ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ ಮೈತ್ರೇಯಿ'**– ಎಂದು ಆತ್ಮತತ್ತ್ವವನ್ನು ಅರಿಯಬೇಕೆಂದು ತಿಳಿಸುತ್ತಾರೆ. ಇಲ್ಲಿ ಆತ್ಮ ಎಂಬ ಪದದಿಂದ ನಿರ್ದಿಷ್ಟವಾಮದೂ ಈ 'ಅಹಂ' ಎಂಬ ಪದಾರ್ಥವೇ.

ದಿವಿಭುವಿಗಳವರೆಗೆ ತ್ರಿವಿಕ್ರಮವಾಗಿ ವ್ಯಾಪಿಸಿ, ಲೋಕದ ಸಕಲ ವ್ಯವಹಾರ ಪ್ರೇರಕವಾದ, ಸೃಷ್ಟಿ, ಸ್ಥಿತಿ, ಲಯಾದಿಗಳಿಗೆ ಕಾರಣವಾದ ಸಮಸ್ತ ದೇವತಾಸ್ವರೂಪವಾದ ಈ 'ಅಹಂ' ಅನ್ನುವುದನ್ನು ಶರೀರ

ಮೊದಲಾದ ಕವಚಾದಿಗಳಿಂದ ಚಿಕ್ಕದಾಗಿ ತಿಳಿದು ನಾವೇ ಅದಕ್ಕೆ ಅಪಮಾನ ಮಾಡುತ್ತಾ, ಜೀವನದ ಸಕಲ ದ್ವಂದ್ವಗಳಿಗೂ ಎಡೆಮಾಡಿಕೊಡುತ್ತಿದ್ದೇವೆ. ಪದೇ ಪದೇ ಈ 'ಅಹಂ ತತ್ತ್ವ'ದ ಔನ್ನತ್ಯ, ಔದಾತ್ಯ, ಬೃಹತ್ತತ್ತೆ, ವೈಶಾಲ್ಯಾದಿಗಳನ್ನು ಮನನ ಮಾಡಿಕೊಳ್ಳುತ್ತಿದ್ದಲ್ಲಿ ಮಾನಾಪಮಾನ ಸುಖ ದುಃಖಾದಿ ಭಾವೋದ್ವೇಗಗಳ ಪ್ರಭಾವ ವಲಯದಲ್ಲಿ ಸಿಲುಕಿ ತೊಳಲಾಡಿ, ನರಳದೆ, ಶಾಂತಿ-ನೆಮ್ಮದಿಗಳನ್ನು ಹೊಂದಲು ಸಾಧ್ಯವಿದೆ.

ಸಂಸಾರಿಗಳಿಗೆ ಇದು ನಿರಂತರ ಸಾಧ್ಯವಿಲ್ಲವಾದರೂ ಹೊಡೆತ, ಆನಂದೋದ್ರೇಕ ಉಂಟಾದಾಗಲಾದರೂ, ಈ ತತ್ತ್ವಸ್ವರೂಪವನ್ನು ಮನನ ಮಾಡುವುದರಲ್ಲಿ ಕ್ಷೇಮವಿದೆ. ಅವರೂ ನೆಮ್ಮದಿಯಿಂದಿದ್ದು ಅವರ ಬಳಿಯಲ್ಲಿ ಸುಳಿದಾಡುವವರಿಗೂ ಸುಖ, ಶಾಂತಿ, ನೆಮ್ಮದಿಗಳನ್ನು ಕೊಡಬಲ್ಲರು. ಇದು ಸಕಲರಿಗೂ ಶ್ರೆಯಃ ಪ್ರೇಯೋ ಮಾರ್ಗ.

'ದಾಸ ಅಹಂ', 'ಜ್ಞಾನಿ ಅಹಂ' ಅಥವಾ 'ಭಕ್ತ ಅಹಂ' ಇವುಗಳನ್ನು 'ಪಕ್ವ ಅಹಂ' ಎಂದು ಕರೆಯಬಹುದು. ಇದು 'ಅಪಕ್ವ ಅಹಂ' ಗಿಂತ ಬೇರೆಯಾದುದು. 'ನಾನು ಕರ್ತ', 'ನಾನು ಶ್ರೀಮಂತನ ಮಗ', 'ನಾನು ಪಂಡಿತ', 'ನಾನು ಧನಿಕ', 'ನನಗೆ ಅವಮಾನ ಮಾಡಲು ನಿನಗೆಷ್ಟು ಧೈರ್ಯ' ಎಂದೆಲ್ಲ ಹೇಳುವುದು 'ಅಪಕ್ವ ಅಹಂ'

—ಶ್ರೀರಾಮಕೃಷ್ಣ

ಸಮಾಜದ ಸಮತೋಲನದಲ್ಲಿ ಸೇವಾಸಂಸ್ಥೆಗಳ ಪಾತ್ರ

ಜೆ.ಎಸ್. ಜಯದೇವ

ಸಮಾಜದಲ್ಲಿ ಸಮಾನತೆಯನ್ನು ಉಂಟುಮಾಡಲು ಇತಿಹಾಸದುದ್ದಕ್ಕೂ ಹಲವು ಪ್ರಯತ್ನಗಳು ನಡೆದಿರುವುವು.ಆದರೆ ಇಂದಿಗೂ ಸಮಾನತೆಯೆಂಬುದು ಕೇವಲ ಆದರ್ಶವಾಗಿಯೇ ಉಳಿದುಕೊಂಡಿದೆ. ಆದರೂ ಈ ಪ್ರಯತ್ನ ಹಲವು ಸಾಮಾಜಿಕ ದೋಷಗಳನ್ನು ಸ್ಥಳೀಯವಾಗಿಯಾದರೂ ನಿವಾರಿಸುವುದರಲ್ಲಿ ಯಶಸ್ವಿಯಾಗಿದೆ. ಈ ದಿಶೆಯಲ್ಲಿ ಸೇವಾಸಂಸ್ಥೆಗಳ ಪಾತ್ರ ಬಹು ಮುಖ್ಯವೆಂದು ಅಭಿಪ್ರಾಯ ಪಡುತ್ತಾರೆ ಶ್ರೀ ಜಯದೇವ. ಇವರು 'ದೀನಬಂಧು' 'ಶಕ್ತಿಧಾಮ' ಮುಂತಾದ ಸೇವಾಸಂಸ್ಥೆಗಳನ್ನು ನಡೆಸುತ್ತಿರುವರು.

ಉದಾತ್ತತೆ ಮತ್ತು ಸ್ವಾರ್ಥತೆ

ಪ್ರಪಂಚದ ಎಲ್ಲ ಜೀವಿಗಳೂ ತಮ್ಮ ಪರಿಸರದಲ್ಲಿ ದೊರೆಯುವ ನಿಸರ್ಗದತ್ತ ಪರಿಕರಗಳನ್ನು ಬಳಸಿಕೊಂಡೇ ಬದುಕಬೇಕಾಗಿರುವುದರಿಂದ ಇರುವುದನ್ನು ಹಂಚಿಕೊಂಡು ಬಾಳುವುದು ಅನಿವಾರ್ಯ. ಕೆಳವರ್ಗದ ಪ್ರಾಣಿಪಕ್ಷಿಗಳಲ್ಲಿ ಇದಕ್ಕಾಗಿ ನಿರಂತರ ಸ್ಪರ್ಧೆ ನಡೆದಿದ್ದು ಜೀವ ವಿಕಾಸಕ್ಕೆ ದಾರಿ ಮಾಡಿಕೊಟ್ಟಿದೆ. ಈ ಪ್ರಕ್ರಿಯೆಯ ಮೂಲತತ್ವ 'ಯೋಗ್ಯತೆಯುಳ್ಳದ್ದು ಉಳಿಯುವುದು' (*Survival of the fittest*) ಎಂಬುದನ್ನು ಡಾರ್ವಿನ್ ಬಹಳ ಚೆನ್ನಾಗಿ ಗುರುತಿಸಿದ.

ಆದರೆ ಮನುಷ್ಯಪ್ರಪಂಚದಲ್ಲಿ 'ಯೋಗ್ಯತೆಯುಳ್ಳದ್ದು ಉಳಿಯುವುದು' ಎನ್ನುವುದು ಒಂದು ಅನಾಗರಿಕ ಕಾಡುನಿಯಮ ಎಂದು ಪರಿಗಣಿಸಲಾಗುತ್ತದೆ. ಸಂಘಜೀವಿಯಾದ ಮನುಷ್ಯನಿಗೆ ಪುಣ್ಯವಶಾತ್ ಪ್ರಕೃತಿದತ್ತವಾದ ಕೆಲವು ವೈಚಾರಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳಿವೆ. ಹಾಗಾಗಿ ಅವನಿಗೆ ತನ್ನ ಬದುಕು ಎಷ್ಟು ಮುಖ್ಯವೊ ಹಾಗೆ ತನ್ನ ಸಹಜೀವಿಗಳೆಲ್ಲರ ಬದುಕೂ ಅಷ್ಟೇ ಮುಖ್ಯ. ತನ್ನ ಸುಖ ಸಂತೋಷದ ಹಾಗೆ ಇತರರ ಸುಖ ಸಂತೋಷವೂ ಮುಖ್ಯ. ಈ ಭಾವನಾತ್ಮಕ ಸಾಮರ್ಥ್ಯವೇ ಸಮಾಜವಾದದ ಮೂಲಸೆಲೆ. ಆದರೆ ಈ ಸದ್ಭಾವನಾ ಸಾಮರ್ಥ್ಯದ ಜೊತೆಗೆ ಮನುಷ್ಯನಲ್ಲಿ ಅಡಗಿರುವ ಸ್ವಾರ್ಥ ಇಂತಹ ಆದರ್ಶ ಸಮಾನತೆ ಮೂಡಲು ದೊಡ್ಡ ಅಡಚಣೆಯಾಗಿದೆ. ವಾಸ್ತವವಾಗಿ ಸಮಾನತೆಗಾಗಿ ನಡೆಯುತ್ತಿರುವ ಹೋರಾಟ ಮನುಷ್ಯನ ಉದಾತ್ತತೆಯ ಮತ್ತು ಸ್ವಾರ್ಥದ ನಡುವೆ ನಡೆಯುತ್ತಿರುವ ಹೋರಾಟವೆಂದೇ ಹೇಳಬೇಕು.

ಸಮಾನತೆಯ ಕನಸು

ತಜ್ಞರ ಪ್ರಕಾರ ನಾಗರಿಕತೆಗೆ ಪೂರ್ವದಲ್ಲಿ ಸಾಮೂಹಿಕ ಒಡೆತನ ವಿದ್ದಿತು. ಆದ್ದರಿಂದ ಸಂಪತ್ತಿನ ಸಮಾನ ಹಂಚಿಕೆಯೂ ಇದ್ದಿತು. ಆದರೆ ಕ್ರಮೇಣ ಸಾಮೂಹಿಕ ಒಡೆತನ ವೈಯಕ್ತಿಕ ಒಡೆತನಕ್ಕೆ ದಾರಿ ಮಾಡಿಕೊಟ್ಟಿತಾದ್ದರಿಂದ ಸಂಪತ್ತಿನ ಅಸಮಾನ ಹಂಚಿಕೆ ಪ್ರಾರಂಭವಾಯಿತು. ಶ್ರೀಮಂತ ಬಡವರ ವರ್ಗೀಕರಣವೂ ಪ್ರಾರಂಭವಾಯಿತು. ಬೈಬಲ್‌ನಲ್ಲಿ ಶ್ರೀಮಂತರನ್ನು ಕ್ರಿಸ್ತ ಖಂಡಿಸುತ್ತಾನೆ. 'ಒಂದು ಒಂಟೆ ಸೂಜಿಕಣ್ಣಿನ ಮುಖಾಂತರ ಹಾಯಬಹುದು, ಆದರೆ ಶ್ರೀಮಂತರಿಗೆ ಸ್ವರ್ಗದ ಬಾಗಿಲನ್ನು ಪ್ರವೇಶಿಸುವುದು ಸಾಧ್ಯವಿಲ್ಲ.'(ಸೇಂಟ್ ಮ್ಯಾಥಿವ್,೧೯.೨೪-೨೫) ಎನ್ನುತ್ತಾನೆ. ಮನುಷ್ಯನು ಲೋಭಿಯಾದ್ದರಿಂದ ಉಪನಿಷತ್ತಿನ ಕಥೆಯಲ್ಲಿ ದೇವರು ಮನುಷ್ಯನಿಗೆ ದಾನಮಾಡು ಎಂದು ಬುದ್ಧಿಹೇಳುವ ಪ್ರಸಂಗ ಒಂದಿದೆ. ಹೀಗೆ ಎಲ್ಲರೂ ಸಮಾನರಾಗಿ ಬದುಕಬೇಕೆಂಬ ಸುಖೀರಾಜ್ಯದ ಅಥವಾ ರಾಮರಾಜ್ಯದ ಕಲ್ಪನೆ ಇಂದು ನೆನ್ನೆಯದಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಈ ಕನಸಿಗೆ ಪುಸ್ತಕ